## 13

# ತೆರೆದ ಮತ್ತು ಮುಚ್ಚಿದ ಕಣ್ಣುಗಳ ಮನುಷ್ಯನು

## (2 ಅರಸು 6:8-17)

ಈಗ ನಾವು ಎಲೀಷನ ಸಾರ್ವಜನಿಕ ಸೇವೆಯನ್ನು ತಲುಪಿದ್ದೇವೆ. ನಮ್ಮ ಹಿಂದಿನ ಅಧ್ಯಯನದಲ್ಲಿ, ನಾವು ಎಲೀಷನು ಮೂರು ಸೈನ್ಯಗಳನ್ನು ರಕ್ಷಿಸಿದ ಕಥೆಯನ್ನು ಓದುತ್ತೇವೆ, ಆದರೆ ಹೆಚ್ಚಿನ ಇತರ ಘಟನೆಗಳು ಖಾಸಗೀಯವು ಆಗಿವೆ. ನಾಮಾನನನ್ನು ವಾಸಿ ಮಾಡುವುದರಿಂದ ಆರಂಭವಾದದ್ದು, ಉಳಿದ ಪ್ರಕರಣಗಳು ಪ್ರವಾದಿಯ ಮತ್ತು ರಾಷ್ಟ್ರೀಯ ನಾಯಕರುಗಳ ಕಥೆಯಾಗಿದೆ.

ಈ ಸರಣಿಯ ಮೊದಲ ಪಾಠದಲ್ಲಿ, ನಾನು ಹೇಳುವುದೇನೆಂದರೆ, ಎಲೀಯನು "ವ್ಯವಸ್ಥೆಯಿಂದ ಹೊರಗೆ" ಕಾರ್ಯಮಾಡಿದನು (ಅಂದರೆ ಆತನು ತನ್ನ ಸಮಯದಲ್ಲಿ ರಾಜಕೀಯ ಮತ್ತು ಸಾಮಾಜಿಕ ಸಂಗತಿಗಳಿಂದ ಹೊರಗೆ) ಆದರೆ ಎಲೀಷನಾದರೋ "ವ್ಯವಸ್ಥೆಯ ಒಡೆಗಡೆ" ಕಾರ್ಯಮಾಡಿದನು ಎಂದು ನಾನು ಹೇಳುತ್ತೇನೆ. ಯಾವುದು ಒಳ್ಳೇಯದೋ? ಅದಕ್ಕೆ ಉತ್ತರವು "ಅದು ಅಲ್ಲಿನ ಪರಿಸ್ಥಿತಿಯನ್ನು ಅವಲಂಭಿಸಿರುತ್ತದೆ" ಎಲೀಯನ ಸಮಯದಲ್ಲಿ, ವ್ಯವಸ್ಥೆಯಲ್ಲಿದ್ದ ಅಧಿಕಾರಿಗಳ ಜೊತೆ ಕೆಲಸ ಮಾಡುವುದಕ್ಕಾಗಿ ಯಾವ ನಿರೀಕ್ಷೆಯೂ ಇರಲಿಲ್ಲ, ಅಲ್ಲಿನ "ವ್ಯವಸ್ಥೆಯಿಂದ ಹೊರಗೆ" ಕಾರ್ಯಮಾಡುವ ಮನುಷ್ಯನ ಅವಶ್ಯಕತೆಯು ದೇವರಿಗಿತ್ತು. ಎಲೀಷನು ತನ್ನ ಸೇವೆಯನ್ನು ಆರಂಭಿಸಿದಾಗ, ಅಲ್ಲಿನ ಸ್ಥಿತಿಯು ಅಲ್ಪವಾಗಿ ಸುಧಾರಿಸಿತು ಮತ್ತು "ವ್ಯವಸ್ಥೆಯ ಒಳಗಡೆ" ಕಾರ್ಯಮಾಡಬಹುದಾದ ಮನುಷ್ಯನ ಅವಶ್ಯಕತೆಯು ದೇವರಿಗೆ ಉಂಟಾಯಿತು. ಅದನ್ನೆ ಎಲೀಷನೂ ಮಾಡಿದನು, ಅದನ್ನೆ ನಾವು ನಮ್ಮ ಉಳಿದ ಭಾಗದಲ್ಲಿ ನೋಡುತ್ತೇವೆ.

ಆ ಮಂಡನೆಯಲ್ಲಿ ಮತ್ತು ಮುಂದಿನದರಲ್ಲಿ, ಎಲೀಷನ ಜೀವಿತದಲ್ಲಿನ ಪರಿಚಿತವಾದ ಪ್ರಕರಣವನ್ನು ನಾವು ಅಧ್ಯಯನಿಸಲಿದ್ದೇವೆ. ಈ ಘಟನೆಗಳಲ್ಲಿ, ಪ್ರವಾದಿಯ ಕಣ್ಣುಗಳನ್ನು ತೆರೆದನು ಮತ್ತು ಮುಚ್ಚಿದನು. ನಮಗೆಲ್ಲರಿಗೂ ಅವಶ್ಯವಿರುವ ಪಾಠಗಳು ಈ ಕಥೆಯಲ್ಲಿ ತುಂಬಿಕೊಂಡಿವೆ.

### ಆಶಾಭಂಗ ಹೊಂದಿದ ಅರಸ (6:8-14)

ಕಥೆಯು ಆರಂಭವಾಗುವದು "ಅರಾಮ್ಯರ ಅರಸನು ಇಸ್ರಾಯೇಲ್ಯರಿಗೆ ವಿರುದ್ಧವಾಗಿ ಯುದ್ಧಕ್ಕೆ ಬಂದನು" (ವಚನ 8ಎ) ಎಂದು. ಈ ಅರಸನು ಬಹುಶಃ ಬೆನ್ಹದದ ಇರಬಹುದು (ನೋಡಿರಿ ವಚನ 24). ಅರಾಮ್ಯರು ಮತ್ತು ಇಸ್ರಾಯೇಲ್ಯರ ಮಧ್ಯ ವೈರತ್ವವು ಮನೆಮಾಡಿತ್ತು. ಈ ಕಥೆಯ ಸಮಯದಲ್ಲಿ, ಬೆನ್ಹದದನು ಇಸ್ರಾಯೇಲ್ಯರ ಜೊತೆಗಿನ "ಯುದ್ಧವು" ಮುಖ್ಯವಾಗಿ ಇಸ್ರಾಯೇಲ್ಯರ ಗಡಿಯುದ್ದಕ್ಕೂ ಅರಾಮ್ಯರ ಸೇನೆಯು ಸುಲಿಗೆ ಮಾಡುವದಕ್ಕಾಗಿ ಕಳಿಹಿಸುವುದೇ ಆಗಿತ್ತು (ನೋಡಿರಿ 5:2; 6:23ಬಿ).

#### ವಿಫಲವಾದ ಯೋಜನೆಗಳು

ಬೆನ್ಹದದನು ತನ್ನ ಸೇನೆಯ ನಾಯಕರುಗಳನ್ನು ಸೇರಿಸಿದನು ಮತ್ತು ಒಂದು ಯೋಜನೆಯನ್ನು ಮಾಡಿದನು: "ಯುದ್ಧದಲ್ಲಿ ಹೊಂಚುಹಾಕತಕ್ಕ ಸ್ಥಳವನ್ನು ತನ್ನ ಸೇನಾಪತಿಗಳೊಡನೆ ಗೊತ್ತುಮಾಡಿದನು" (6:8ಬಿ). "ಸೈನ್ಯ" ಎಂಬ ಪದದ ಭಾಷಾಂತರವು

ಅನಿಶ್ಚಿತವಾದ ಅರ್ಥವನ್ನು ಹೊಂದಿದೆ. ಆದರೆ ಕೇವಲ ಡೇರೆಗಳನ್ನು ಹಾಕುವ ಸ್ಥಳಕ್ಕಿಂತ ಹೆಚ್ಚಾದ ಅರ್ಥವನ್ನು ಒಳಗೊಂಡಿದೆ. REBಯಲ್ಲಿ "ಅಂಥವುಗಳಲ್ಲಿ ಮತ್ತು ಅಂತಹ ದಿಶೆಗಳ ಮೇಲೆ ಆಕ್ರಮಣ ಮಾಡಿರಿ ಎಂದು ಅರ್ಥೈಸುತ್ತೇನೆ." CJB ಯಲ್ಲಿ "ನಾನು ನನ್ನ ಅಡಗಿಸಿಟ್ಟ ಸೈನ್ಯವನ್ನು ಇಂಥ ಇಂಥ ಸ್ಥಳಗಳಲ್ಲಿ ಇರಿಸಿದ್ದೇನೆ" ಎಂದಿದೆ. ಇಸ್ರಾಯೇಲ್ಯರ ಸೈನ್ಯವನ್ನು ಅಡಿಗಿಸಿಡುವದು ಅಥವಾ ಇಸ್ರಾಯೇಲ್ಯರ ಅರಸನನ್ನು ಚಕಿತಗೊಳಿಸುವ ಮತ್ತು ಸೆರೆ ಹಿಡಿಯುವದು ಬಹುಶಃ ಅರಸನ ಉದ್ದೇಶವಾಗಿರಬಹುದು. (ವಚನ 9ರಲ್ಲಿ "ನೀನು" ಎಂಬ ಪದನ್ನು ಗಮನಿಸಿರಿ.) ಪ್ರತಿಸಾರಿ ಆತನ (ಬೆನ್ಹದದ) ಸೈನ್ಯವು ಆತನು ಎಲ್ಲಿ ಬಲೆಯೊಡ್ಡುವ ಯೋಜನೆಯನ್ನು ಮಾಡಿರುತ್ತಿದ್ದನೋ ಅದೇ ಸ್ಥಳಕ್ಕೆ ಹೋಗುತ್ತಿತ್ತು, ಆದರೆ ಅವರು ಹಿಂದಕ್ಕೆ ಹೋಗದಂತೆ ಆ ಸ್ಥಳಕ್ಕೆ ಬಲವಾದ ಇಸ್ರಾಯೇಲ್ಯರ ಕಾವಲಿರುತ್ತಿತ್ತು (ನೋಡಿರಿ ವಚನ 10ಎ).

ಅರಸನ ಆಶಾಭಂಗಕ್ಕೆ ಕಾರಣ ಎಂದರೆ ದೇವರು ಆತನ ಯೋಜನೆಗಳ ಬಗೆಗೆ ಎಲೀಷನಿಗೆ ಈಗಾಗಲೇ ಮುಂತಿಳಿಸಿದ್ದನು, ಅಷ್ಟೇ ಅಲ್ಲ ಪ್ರವಾದಿಯು ಗೇಹಜಿಯ ಚಟುವಟಿಕೆಗಳನ್ನೂ ತಿಳಿದಿದ್ದನು (5:26ಎ), ಹೀಗೆ ಆತನು ಬೆನ್ಹದದನ ಒಳತಂತ್ರದ ಬಗೆಗೆ ಎಚ್ಚರದಿಂದಿದ್ದನು. ಎಲೀಷನು ಈ ಮಾಹಿತಿಯನ್ನು ಇಸ್ರಾಯೇಲ್ಯರ ಅರಸನಿಗೆ ರವಾನಿಸಿದನು (ಬಹುಶಃ ಯೋರಾಮನಿಗೆ) (ವಚನ 6:9ಎ). ಎಲೀಷನು ಯೋರಾಮನನ್ನು ಮೆಚ್ಚುತ್ತಿರಲಿಲ್ಲ (ನೋಡಿರಿ 3:13, 14), ಆದರೆ ಆತನು ತನ್ನ ವೈಯಕ್ತಿಕ ದ್ವೇಷವು ದೇವರ ದೇಶರಕ್ಷಣೆಯ ಆತನ ಪಾತ್ರದಲ್ಲಿ ಮಧ್ಯಪ್ರವೇಶಿಸಲು ಬಿಡಲಿಲ್ಲ.

ಎಲೀಷನು ಈ ಸಂದೇಶವನ್ನು ಅರಸನಿಗೆ ಕಳುಹಿಸಿದನು: "ಜಾಗರೂಕತೆಯಿಂದಿರಿ; ನೀವು ಇಂತಿಂಥ ಸ್ಥಳದಲ್ಲಿ ಹಾಯಬಾರದು, ಅಲ್ಲಿ ಅರಾಮ್ಯರು ಅಡಗಿಕೊಂಡಿದ್ದಾರೆ" (ವಚನ 6:9ಬಿ). "ನೀನು" ಎಂಬ ಪದವು ಅರಸನ ಸೈನ್ಯವನ್ನು ಅಥವಾ ಅರಸನನ್ನೇ ಸೂಚಿಸುವುದಾಗಿರಬಹುದು. ಈ ಸಮಯದಲ್ಲಿ ಅರಸನಾದ ಯೋರಾಮನು ಎಲೀಷನ ಬಗೆಗೆ ಸಾಕಷ್ಟು ತಿಳಿದುಕೊಂಡಿದ್ದು (ನೋಡಿರಿ 3:18, 24; 5:8) ಪ್ರವಾದಿಯು ಮಾತನಾಡುವಾಗ ಅದನ್ನು ಅರಿತುಕೊಂಡನು, ಆತನು ಕೇಳಲೇಬೇಕಿತ್ತು. ಈ ಮಾಹಿತಿಯ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಆತನು: "... ದೇವರ ಮನುಷ್ಯನು ಸೂಚಿಸುವ ಎಲ್ಲಾ ಸ್ಥಳಗಳಿಗೂ ಇಸ್ರಾಯೇಲ್ಯರ ಅರಸನು ಹೇಳಿಕಳುಹಿಸುತ್ತಿದ್ದನು ಹೀಗೆ ಅವನು ಹಲವು ಸಾರಿ ಅರಾಮ್ಯರ ಅರಸನ ಕೈಗೆ ಸಿಕ್ಕದಂತೆ ತಪ್ಪಿಸಿಕೊಂಡನು" (6:10ಎ).

ಅರಾಮ್ಯರ ಅರಸನು ಪದೇ ಪದೇ ಅವರನ್ನು ಆಶಾಭಂಗಗೊಳಿಸುತ್ತಲೇ (ವಚನ 10ಬಿ) - ಅದು ಅನೇಕ ಸಾರಿ ಕಾಕತಾಳೀಯವೆಂಬಂತೆ ಎದ್ದು ನಿಂತ್ತಿದ್ದನು. 11 ನೇಯ ವಚನಕ್ಕನುಸಾರವಾಗಿ, "ಈ ದೆಸೆಯಿಂದ ಅರಾಮ್ಯರ ಅರಸನು ಕಳವಳಗೊಂಡನು [ಕೋಪೋದ್ರಿಕ್ತನಾದನು]" (ವಚನ 11ಎ) ಎಂದಿದೆ. ಇಬ್ರಿಯ ಪದದ "ಕೋಪೋದ್ರಿಕ್ತನಾಗು" ಎಂಬುದರ ಭಾಷಾಂತರದ ಅರ್ಥವು "ಬಿರುಗಾಳಿ ಬೀಸಿದಂತೆ"[1] ಎಂದರ್ಥಕೊಡುತ್ತದೆ. CEVಯು ಹೇಳುವುದೇನೆಂದರೆ ಅರಸನು ಕೋಪೋದ್ರಿಕ್ತನಾದನು.

ಅರಾಮ್ಯರ ಅರಸನು ತನ್ನ ಸಿಬ್ಬಂದಿ ವರ್ಗದಲ್ಲಿ ವಿಶ್ವಾಸ ದ್ರೋಹಿಗಳು, ಯಾರೋ ಕೆಲವರು ಇರಬಹುದು. ಅವರು ತನ್ನ ಯೋಜನೆಯನ್ನು ವೈರಿಗಳಿಗೆ ಅರಹುತ್ತಿರಬಹುದು ಎಂದು ನಿರ್ಧರಿಸಿದನು. ಆತನು ತನ್ನ ತಾಂತ್ರಿಕ ಸಲಹೆಗಾರರನ್ನು ಕರೆದನು, ಮತ್ತು "ನಮ್ಮವರಲ್ಲಿ ಇಸ್ರಾಯೇಲ್ಯರ ಅರಸನ ಪಕ್ಷದವರು ಯಾರು?" (ವಚನ 11ಬಿ) ಎಂದು ಕೇಳಿದನು. ಸ್ಟೆಟುಗೆಂಟ್ ಹೇಳುವುದೆಂದರೆ "ಇಸ್ರಾಯೇಲ್ ಅರಸನಿಗಾಗಿ ನನಗೆ ವಿಶ್ವಾಸಘಾತುಕರಾದವರು ಯಾರು?"[2]

ಇದು ಆತಂಕದ ಕ್ಷಣವಾಗಿರಬಹುದು. ಅರಸನ ಶಂಕಿತರಿಗೆ ಸಿಕ್ಕುವ ಫಲವೆಂದರೆ ಮರಣದಂಡನೆಯಾಗಿದೆ. ಅಲ್ಲಿ ಉಪಸ್ಥಿತವಿದ್ದರಲ್ಲಿ ಒಬ್ಬರು ಮಾತನಾಡಲಾರಂಭಿಸಿದರು: "ನನ್ನ

ಒಡೆಯನಾದ ಅರಸೇ, ಹಾಗಲ್ಲ, ಇಸ್ರಾಯೇಲ್ಯರಲ್ಲಿ ಎಲೀಷನೆಂಬೊಬ್ಬ ಪ್ರವಾದಿಯಿರುತ್ತಾನೆ; ನೀನು ಮಲಗುವ ಕೋಣೆಯಲ್ಲಿ ಆಡುವ ಮಾತುಗಳನ್ನೂ ಸಹ ಅರಿತುಕೊಂಡು ಎಲ್ಲವನ್ನೂ ಇಸ್ರಾಯೇಲ್ಯರ ಅರಸನಿಗೆ ತಿಳಿಸುತ್ತಾನೆ" (ವಚನ 12). "ನೀನು ಮಲಗುವ ಕೋಣೆಯಲ್ಲಿ ಆಡುವ ಮಾತುಗಳನ್ನೂ ಸಹ ಅರಿತುಕೊಂಡು" ಇದು ಒಂದು ನುಡಿಗಟ್ಟು ಆಗಿದ್ದು ಬಲು ವೈಯಕ್ತಿಕ ಆಲೋಚನೆಗಳು ಮತ್ತು ಮಾತು ಗಳು ಇವುಗಳನ್ನು ಅದು ಸೂಚಿಸುವುದಾಗಿದೆ (ಪ್ರಸಂಗಿ 10:20ನ್ನು ಹೋಲಿಸಿರಿ).

ನಾವು ಏನೇ ಮಾಡಲಿ, ನಾವು ಏನನ್ನೇ ಮಾತನಾಡಲಿ, ನಾವು ಏನನ್ನೇ ಯೋಚಿಸಲಿ ಕರ್ತನಿಂದ ಮರೆಯಾದದ್ದು ಒಂದೂ ಇಲ್ಲ ಎಂಬುದನ್ನು ನಾನು ನೀನೂ ನೆನಪಿನಲ್ಲಿಟ್ಟುಕೊಳ್ಳುವದು ಅವಶ್ಯವಾಗಿದೆ. "ಆತನ ದೃಷ್ಟಿಗೆ ಸಮಸ್ತವೂ ಮುಚ್ಚುಮರೆಯಿಲ್ಲದ್ದಾಗಿಯೂ ಬೈಲಾದದ್ದಾಗಿಯೂ ಅದೆ" (ಇಬ್ರಿಯ 4:13). ಹೆನ್ರಿ ಬ್ಲಂಟರ್ ಈ ಹೇಳಿಕೆಯು ಬಹು ನಿಜವಾದದ್ದಾಗಿದೆ: "ದೇವರು ಎಲ್ಲರ ಕಣ್ಣು ಎಲ್ಲರ ಕಿವಿ, ಎಲ್ಲರ ಜ್ಞಾನವೂ ಆಗಿದ್ದಾನೆ ಎಂದು ನಾನು ಹೇಳುತ್ತೇನೆ ಮತ್ತು ಆತನು ನಿಶ್ಚಿತವಾಗಿಯೂ ಕುರುಡನು, ಕಿವುಡನೂ ಮತ್ತು ಮೂಕನೂ ಮತ್ತು ಅಲಕ್ಷವಹಿಸುವವನೂ ಆಗಿದ್ದಾನೆ ಎಂದು ಕೊಂಡು ನಾವು ಜೀವಿಸುತ್ತೇವೆ."[3]

ಎಲೀಷನು ವರ್ತಮಾನ ಕೊಡುವವನಾಗಿದ್ದನೆಂದು ಅಲ್ಲಿ ಮಾತಾಡುತ್ತಿದ್ದವರಿಗೆ ಹೇಗೆ ತಿಳಿಯಿತು? ವಚನ 12ರಲ್ಲಿ ಸಲಹೆಯನ್ನು ನೀಡಿದ ಸೇವಕನು ನಾಮಾನಾಗಿರಬಹುದು. ವಾಸಿಯಾಗದ್ದನ್ನು ವಾಸಿಮಾಡುವವನಿಂದ ಮರೆಯಾದಂಥದ್ದನ್ನು ತಿಳಿದುಕೊಳ್ಳು ವುದರಲ್ಲಿ ಯಾವ ತೊಂದರೆಯೂ ಇಲ್ಲ ಎಂದು ನಾಮಾನನು ಭಾವಿಸಿಕೊಂಡಿದ್ದನು. ಹೇಗೋ, ಅಲ್ಲೊಂದು ಸರಳವಾದ ಉತ್ತರ ಬರಬಹುದು. ಅರಾಮ್ಯರು ಖಚಿತವಾಗಿ ತನ್ನ ಗೂಢಚಾರರನ್ನು ಹೊಂದಿರುತ್ತಿದ್ದರು. ಅವರಲ್ಲೊಬ್ಬನು ಇಸ್ರಾಯೇಲ್ಯರ ಸೈನಿಕರು ಎಲೀಷನು ತಮಗೆ ಹೇಗೆ ವಿಜಯವನ್ನು ದಯಪಾಲಿಸಿದನು ಎಂಬುದನ್ನು ಮಾತನಾಡುತ್ತಿರುವುದನ್ನು ಕೇಳಿಸಿ ಕೊಂಡಿದ್ದರು.

**ಖಚಿತವಾಗಿ ಹುಸಿಗೊಳ್ಳುವ ಯೋಜನೆ**

ವಾಸ್ತವವೆಂದರೆ ಅರಸು ಎಲೀಷನ ಬಗೆಗಿನ ಜನರ ಮಾತುಗಳನ್ನು ನಂಬುವಂತಹದ್ದನ್ನು ಬಹುಶಃ ನಾಮಾನನು ಬೆನ್ಹದದನಿಗೆ ಪ್ರವಾದಿಯ ಅದ್ಭುತವಾದ ಶಕ್ತಿಯ ಬಗೆಗೆ ಮಾಹಿತಿಯನ್ನು ನೀಡಿದ್ದನು ಎಂಬುದನ್ನು ಇದು ಸೂಚಿಸುವುದಾಗಿದೆ. ಆತನು ಬಲು ಬಲವಾದ ಸೈನ್ಯ ಹೊಂದುವ ಉದ್ದೇಶವು ಇಸ್ರಾಯೇಲ್ಯರ ಸೈನಿಕರನ್ನು ಸೋಲಿಸುವುದಲ್ಲ ಅಥವಾ ಜೋರಾಮ ನನ್ನು ಸೆರೆಹಿಡಿಯುವದೂ ಅಲ್ಲ ಎಂದು ಅರಸನು ನಿರ್ಧರಿಸಿದನು. ಅದರ ಬದಲಾಗಿ, ಪ್ರವಾದಿಯ ತನ್ನ ಮುಂದಿನ ಸೈನ್ಯದ ತಂತ್ರಗಳನ್ನು ಕಾರ್ಯಗತಗೊಳಿಸದೇ ಹಾಗೆ ಅವುಗಳನ್ನು ಭಗ್ನಗೊಳಿಸುವುದೇ ಆಗಿತ್ತು: "ಆತನು ತನ್ನ ಗೋಢಚಾರನ್ನು ಈ ಸೂಚನೆಗ ಳೊಡನೆ ಕಳುಹಿಸಿದನು ಅವನು ಎಲ್ಲಿರುತ್ತಾನೆಂದು ವಿಚಾರಿಸಿರಿ, ನಾನು ಅವನನ್ನು ಹಿಡಿಸು ತ್ತೇನೆ" (2 ಅರಸು 6:13ಎ).

"ಪ್ರವಾದಿಯು ಧೋತಾನಿನಲ್ಲಿರುತ್ತಾನೆ" ಎಂಬ ವರದಿಯೊಂದಿಗೆ ಅವರು ಬೇಗನೇ ವಾಪಸ್ಸಾದರು. ಧೋತಾನ ಗ್ರಾಮವು ಸಾಮಾರ್ಯ ಪಟ್ಟಣದಿಂದ ಉತ್ತರಕ್ಕೆ ಸುಮಾರು ಹನ್ನೊಂದು ಅಥವಾ ಹನ್ನೆರಡು ಮೈಲಿಯಲ್ಲಿರುವ ಗುಡ್ಡದಲ್ಲಿ ಇರುವಂಥದ್ದಾಗಿದೆ. ವರ್ಷಗಳ ಹಿಂದೆ, ಯೋಸೆಫನು ತನ್ನ ಸಹೋದರರಿಂದ ವಂಚನೆಗೊಳಗಾಗಿದ್ದ ಮತ್ತು ಗುಂಡಿಯಲ್ಲಿ ಹಾಕಲ್ಪಟ್ಟ ಸ್ಥಳವೇ ಈ ದೋತಾನ (ನೋಡಿರಿ ಆದಿಕಾಂಡ 37:17-24). ಒಬ್ಬ ಲೇಖಕರು ಈ ಸ್ಥಳವನ್ನು ಅಪಾಯಕಾರಿ ಮತ್ತು ಪ್ರಾರಬ್ಧ ಎಂದು ಕರೆಯುತ್ತಾರೆ.[4] ಎಲೀಷನ ಮನೆಯು ಸಮಾರ್ಯದಲ್ಲಿತ್ತು (ನೋಡಿರಿ 2 ಅರಸು 5:3, 9; 6:24, 32ಎ), ಆದರೆ ಆತನು ತನ್ನ

ಸೇವೆಗಾಗಿ ವಿಸ್ತಾರವಾಗಿ ಪ್ರಯಾಣಿಸುತ್ತಿದ್ದನು. ಆತನು ಅಲ್ಲಿ ಅಥವಾ ದೋತಾನಿನಲ್ಲಿ ಪ್ರತ್ಯಕ್ಷವಾಗಿ ಒಂದು ಕಾರ್ಯದಲ್ಲಿ ಕೆಲ ಕಾಲಗಳ ವೆರೆಗೆ ತೊಡಗಿಕೊಂಡಿರಬಹುದು, ಆತನ ಉಪಸ್ಥಿತಿಯು ಹೆಚ್ಚಿನ ಸಮಯವನ್ನು ತೆಗೆದುಕೊಂಡಿರಬಹುದು.

ಬೆನ್ಹದದನು ಎಲೀಷನು ಅಲ್ಲಿರುವನು ಎಂದು ತಿಳಿದಾಗ "ಆತನು ರಥರಥಾಶ್ವ ಮಹಾ ಸೈನ್ಯವನ್ನು ಅಲ್ಲಿಗೆ ಕಳುಹಿಸಿದನು" (ವಚನ 14ಎ). ಯಾಕೆಂದರೆ ಆತನನ್ನು ಹಿಡಿದು ತರಲು (ವಚನ 13). ಆತನ ಸೈನಿಕರು ಆತನನ್ನು ಜೀವಂತವನ್ನಾಗಿಯೂ ಅಥವಾ ಶವವನ್ನಾಗಿಯೂ ತಂದಾಗ್ಯೂ ಆತನು ಯಾವ ಚಿಂತೆಯನ್ನು ಮಾಡುತ್ತಿರಲಿಲ್ಲ. ಅರಸನು ತನ್ನ ಸಮಸ್ತ ಸೈನ್ಯವನ್ನು ಅಲ್ಲಿಗೆ ಕಳುಹಿಸಲಿಲ್ಲ (ವಚನ 24 ರೊಂದಿಗೆ ಹೋಲಿಸಿರಿ), ಆದರೆ ಸಾಮಾನ್ಯ ವಾಗಿ ಮುತ್ತಿಗೆ ಹಾಕುವಾಗ ಉಪಯೋಗಿಸುವುದಕ್ಕಿಂತ ಹೆಚ್ಚಿನ ಸೈನ್ಯದ ತುಕಡಿಯನ್ನು ಅಲ್ಲಿಗೆ ಕಳುಹಿಸಿದನು. ಈ ಸೈನ್ಯದ ತುಕಡಿಯು ಅನೇಕ ಕಾಲಾಳು ಸೈನಿಕರು ("ಮಹಾಸೈನ್ಯ"), ಅಶ್ವದಳ ("ಕುದುರೆಗಳು") ಮತ್ತು ರಥ ದಳ ("ರಥಗಳು") ಇವುಗಳನ್ನು ಒಳಗೊಂಡಿತ್ತು. ದೋತಾನಿನಂತಹ ಚಿಕ್ಕ ಪಟ್ಟಣವನ್ನು ಸುತ್ತುವರೆಯಲು ಮಹಾ ಸೈನ್ಯವೇ ಬೇಕಾಯಿತು.

ಅರಸನ ತಾರ್ಕಿಕ ಶಕ್ತಿಯು ಆಶ್ಚರ್ಯಯತವಾದದ್ದು. ಒಂದು ವೇಳೆ ಎಲೀಷನು ಅರಸನ ಸೈನ್ಯದ ಯೋಜನೆಯನ್ನು ತಿಳಿದಿದ್ದಾದರೆ, ಆತನು ಈ ಯೋಜನೆಯಿಂದ ಯಾಕೆ ಎಚ್ಚರಗೊಳ್ಳಲಿಲ್ಲ? ಎಲೀಷನು ಅರಸನ ಮಲಗುವ ಕೋಣೆಯಲ್ಲಾಡುವ ಮಾತುಗಳನ್ನೂ ಕೂಡ ತಿಳುಕೊಳ್ಳುವಂತವನಿರುವಾಗ (ವಚನ 12), ಅರಸನು ಆತನನ್ನು ತಾನು ಮೋಸ ಗೊಳಿಸುವ ಬಹುದು ಎಂದು ಹೇಗೆಂದುಕೊಂಡನು? ಆರಂಭದಲ್ಲಿಯೇ ಮುಳುಗುವ ಯೋಜನೆ ಇದಾಗಿತ್ತು. ಇದಲ್ಲದೆ, ಮಾನವನ ದೃಷ್ಟಿಕೋನದಿಂದ ಈ ರಣನೀತಿಯು ಬಲಯುತವಾಗಿ ಕಂಡು ಬಂದಿತು.

ಸೈನ್ಯದವರು ರಾತ್ರಿಯ ವೇಳೆಯಲ್ಲಿ ದೋತಾನಿಗೆ ಮುತ್ತಿಗೆ ಹಾಕಿದರು (ವಚನ 14ಬಿ). ಇದರಿಂದ ಎಲೀಷನು ಸೈನಿಕರು ಬರುವುದನ್ನು ಮತ್ತು ಪಟ್ಟಣವು ಆತನ ಕೈ ತಪ್ಪುದವನ್ನು ನೋಡಬಾರದು ಎಂದಿರಬಹುದಿತ್ತು. ಬೇಗನೇ, ಅವರು "ಪಟ್ಟಣವನ್ನು ಸುತ್ತುವರೆದರು" (ವಚನ 14ಸಿ). ಪ್ರವಾದಿಯು ಅಲ್ಲಿಂದ ತಪ್ಪಿಸಿಕೊಳ್ಳುವುದು ಸಾಧ್ಯ ವೇ ಇಲ್ಲ.

## ಭಯಾನಕನಾದ ಸೇವಕ (6:15)

ಏನು ಸಂಭವಿಸುತ್ತದೆ ಎಂಬುದನ್ನು ಎಲೀಷನು ಬಲು ನಿಶ್ಚತವಾಗಿ ತಿಳಿದಿದ್ದನು, ಆದರೆ ಅದು ಆತನ ನಿದ್ದೆಯನ್ನು ಹಾಳುಮಾಡಲಿಲ್ಲ. ಆತನಲ್ಲಿ ಭರವಸೆಯು ಇದ್ದುದರಿಂದ ಆತನು ನಿದ್ರೆಯನ್ನು ಅಥವಾ ಆತನು ಮಲಗುವುದನ್ನು ಬಿಡಲಿಲ್ಲ (ಕೀರ್ತನೆ 121:4).

**ತುಂಬಿ ಹೊರಸೂಸುವ ಒತ್ತಡ?**

ಮರುದಿನ ಮುಂಜಾನೆ ದೇವರ ಮನುಷ್ಯನ "ಸೇವಕನು" ಬೇಗನೇ ಎದ್ದು ಹೊರಗೆ ಹೋದನು (2 ಅರಸು 6:15ಎ). ಇದು ನಾಮಾನನು ವಾಸಿಯಾಗುವುದಕ್ಕಿಂತ ಮುಂಚೆ ಸಂಭವಿಸಿದ್ದರೆ, ಅಲ್ಲಿದ್ದ ಸೇವಕನು ಗೇಹಜಿಯಾಗಿರುತ್ತಿದ್ದನು. ಬಹುಶಃ ಎಲೀಷನು ಗೇಹಜಿಯು ಹೊರಟುಹೋದನಂತರ ಇನ್ನೊಬ್ಬ ಸೇವಕನನ್ನು ನೇಮಿಸಿಕೊಂಡಿರಬಹುದು (5:27), ಬಹುಶಃ ಇನ್ನೊಬ್ಬ ಪ್ರವಾದಿ ಮಂಡಲಿಯವನೂ ಇರಬಹುದು. ಹಾಗಿದ್ದದ್ದೇ ಆದರೆ, 9:1ರಲ್ಲಿ ಸೂಚಿತವಾದಂತೆ ಪ್ರವಾದಿ ಮಂಡಲಿಯವನಾಗಿಲ್ಲದೇ ಹೋದರೆ, ಕೇವಲ ಇದರಲ್ಲಿಯೇ ನಾವು ಹೊಸದಾದ ಸೇವಕನ ಬಗೆಗೆ ಓದುತ್ತೇವೆ.

ಬಹಶಃ ಸೇವಕರು ನೀರನ್ನು ತರಲು ಮತ್ತು ದಿನನಿತ್ಯದ ಚಟುವಟಿಕೆಗಳ ಸಿದ್ಧತೆಗಾಗಿ ಬೇಗನೇ ಏಳುತ್ತಿರಬಹುದು. ಆತನು, ಎಲೀಷನು ಸಮಾರ್ಯಕ್ಕೆ ಮರಳುವ ತಯಾರಿಕೆಗಾಗಿ ತೊಡಗಿರಬಹುದು. ಆತನು ರಾತ್ರಿವೇಳೆಯಲ್ಲಿ ಸಪ್ಪಳವನ್ನೂ ಸಹ ಕೇಳಿರಬಹುದು (ಮತ್ತು

ಮೊದಲ ಮಾಹಿತಿಗಾಗಿಯೂ ಸಹ) ಆತನು ಹೊರಗೆ ಹೋಗಿರಬಹುದು.[5]

ಹೊರಗೆ ಹೋಗುವುದಕ್ಕಾಗಿ ಕಾರಣವು ಏನೇ ಇರಲಿ, ಹೊರಗೆ ಬಂದು ನೋಡಿದ ದೃಷ್ಯವು ಭಯಾನಕವಾಗಿತ್ತು: "ರಥರಥಾಶ್ವ ಸಹಿತವಾದ ಮಹಾಸೈನ್ಯವು ಬಂದು ಪಟ್ಟಣದ ಸುತ್ತ ನಿಂತಿರುವುದನ್ನು ಆತನು ಕಂಡನು" (6:15ಬ).

> ಉತ್ತರಕ್ಕೆ, ಪೂರ್ವಕ್ಕೆ, ದಕ್ಷಿಣಕ್ಕೆ ಮತ್ತು ಪಶ್ಚಿಮಕ್ಕೆ - ಎತ್ತ ದೃಷ್ಟಿ ಹಾಸಿದತ್ತ ಆತನು ಸೈನ್ಯವನ್ನು ಕಾಣಬಹುದಿತ್ತು - ಪಟ್ಟಣವು ಕಬ್ಬಿಣದ ಪಾಶದ ವ್ಯಕ್ತಿಗಳ (ಅರಾಮ್ಯ) ಸೇನೆಯು ಪಟ್ಟಣವನ್ನು ಸಂಪೂರ್ಣವಾಗಿ ಸುತ್ತುವರೆದಿದೆ ... ಸೂರ್ಯನ ಬೆಳಕು ಪೂರ್ವದ ಬೆಟ್ಟಗಳಲ್ಲಿ ಉದಯಿಸುತ್ತಿತ್ತು. ಸೇವಕನು ರಥಗಳ ಗುಡುಗುಟ್ಟುವ ಸದ್ದನ್ನು, ಕುದುರೆಯ ಗೊರಸಿನ ಸದ್ದನ್ನೂ ಮತ್ತು ಸೈನಿಕರ ಸಂಭಾಷಣೆಗಳನ್ನು ಮತ್ತು (ಅರಾಮ್ಯರ) ಸೇನೆಯ ನಾಯಕರುಗಳು ಕೂಗುವ ಸದ್ದನ್ನು ಕೇಳುತ್ತಿದ್ದಾನೆ.[6]

ಈ ಸೇವಕನು ಖಚಿತವಾಗಿ ಇಸ್ರಾಯೇಲ್ಯರ ಅರಸ ಮತ್ತು ಎಲೀಷನ ಮಧ್ಯದ ಮಾತುಕತೆಯನ್ನು ಖಂಡಿತವಾಗಿ ತಿಳಿದಿರಬಹುದು, ಈ ಸೈನ್ಯವು *ಅವರಿಗೋಸ್ಕರವೇ* ಅಲ್ಲಿದೆ ಎಂಬುದು ಆತನಿಗೆ ಖಚಿತವಾಯಿತು. ಆತನು ಮನೆಯೊಳಕ್ಕೆ ಹಿತಿರುಗಿಕೊಂಡು ಓಡಿಹೋದನು, ಮತ್ತು ಎಲೀಷನು ಜೋರಾಗಿ ಕರೆದನು, "ಅಯ್ಯೋ ಸ್ವಾಮಿ ಏನು ಮಾಡೋಣ?" (ವಚನ 15ಸಿ) ಎಂದನು. ಆತನ ಉಧ್ಗಾರದ ಅರ್ಥವು "ಎಲ್ಲವೂ ಮುಗಿದು ಹೋಯಿತು! ನಾವು ಸೆರೆಹಿಡಿಯಲ್ಪಟ್ಟೆವು ಮತ್ತು ಬಹುಶಃ ನಾವು ಕೊಲ್ಲಲ್ಪಡಬಹುದು" ಎಂದಾಗಿ ಇತ್ತು. "ನಾವು ಏನು ಮಾಡೋಣ?" ಎಂಬ ಪ್ರಶ್ನೆಯು ಸೂಚಿಸುವುದೇನೆಂದರೆ "ನಾವು ಏನೂ ಮಾಡಲು ಸಾಧ್ಯವೇ ಇಲ್ಲ! ಇಲ್ಲಿ ಯಾವ ನಿರೀಕ್ಷೆಯೂ ಇಲ್ಲ!" ಈತನು ಹೊಸದಾದ ಸೇವಕನಾಗಿದ್ದರೆ, ಬಹುಶಃ ಅರ್ಥೈಸಿಕೊಳ್ಳದೇ ಇದ್ದುದಕ್ಕಾಗಿ ಆತನಿಗೆ ಕ್ಷಮೆಯು ಇತ್ತು - ಆತನು ಎಲೀಷನೊಡನೆ ಇದ್ದಷ್ಟು ಹೊತ್ತು - ಆತನಿಗೆ ಯಾವಾಗಲೂ ನಿರೀಕ್ಷೆಯು ಇದೆ.

**ಹೊರಸೂಸುವ ಜಗತ್ತು?**

ಎಲೀಷನ ಜೊತೆಯಿರುವ ಸೇವಕನನ್ನು ನೀವು ಗುರುತಿಸಬಲ್ಲಿರಾ? ಆ ಸಂದರ್ಭದಲ್ಲಿ ಜಗತ್ತಿನಿಂದ ಮಿತಿಮೀರಿಹೋದದ್ದನ್ನು ನೀವು ಅನುಭವಿಸಿದ್ದೀರಾ? ನಮ್ಮ ಸುತ್ತಲಿನ ಪಾಪ ಶೋಧನೆಯೆಡೆಗೆ ನೀವು ನೋಡಿದಾಗ, ಕೆಲಸಾರಿ ಸ್ಥಿತಿಗಳು ಅಸಹಯಾಕವಾದದ್ದು ಎನ್ನಿಸುತ್ತಿದೆಯಾ? "ನಾನೇನು ಮಾಡಲಿ?" ಎಂದು ಕೂಗಬೇಕು ಎಂದೇನಾದರೂ ನಿಮಗೆ ಅನ್ನಿಸಿದ್ದಿದೆಯಾ? ಹಾಗಿದ್ದಿದ್ದೇ ಆದರೆ, ಆಗ ನಿಮಗೆ ಅಂದು ಸೇವಕನಿಗೆ ಅವಶ್ಯವಾದ ಸಂದೇಶವೇ ನಿಮಗೂ ಅವಶ್ಯವಿದೆ.

## ನಿರ್ಭಯಸ್ಥನಾದ ಪ್ರವಾದಿ (6:16, 17)

**ಭಯಗ್ರಸ್ಥರಿಗೆ ಸಮಾಧಾನ**

ಎಲೀಷನು ತನ್ನ ನಡುಗುತ್ತಿದ್ದ ಸೇವಕನನ್ನು ಶಾಂತಗೊಳಿಸಲು ಪ್ರಯತ್ನಿಸಿದನು: "ಹೆದರಬೇಡ" (ವಚನ 16ಎ). ಈ ಪದಗಳು ಆಗಾಗ್ಗೆ ವೇದಭಾಗದಲ್ಲಿ ಸಿಕ್ಕುವಂತದ್ದಾಗಿದೆ; ಅವರೆ ಎಲ್ಲಾ ಸಮಯದಲ್ಲಿ ಜನರಿಗಾಗಿ ದೇವರ ಸಂದೇಶವಾಗಿದೆ (ನೋಡಿರಿ ಮತ್ತಾಯ 10:28, 31; 1 ಪೇತ್ರ 3:14; ಪ್ರಕಟಣೆ 2:10). "ನನಗೆ ವಿರೋಧವಾಗಿ ದಂಡಿಳಿದು ಬಂದರು ನನಗೇನೂ ಭಯವಿಲ್ಲ" (ಕೀರ್ತನೆ 27:3ಎ) ಎಂದು ಕೀರ್ತನೆಗಾರನು ಬರೆಯುತ್ತಾನೆ.

ನಾವೇಕೆ ಹೆದರಬಾರದು? ಸೇವಕನು ಯಾಕೆ ಹೆದರಬಾರದು? "ಅವರ

ಕಡೆಯಲ್ಲಿರುವವರಿಗಿಂತಲೂ ನಮ್ಮ ಕಡೆಯಲ್ಲಿ ಇರುವವರು ಹೆಚ್ಚಾಗಿದ್ದಾರೆ" (2 ಅರಸು 6:16ಬಿ; 2 ಪೂರ್ವಕಾಲವೃತ್ತಾಂತ 32:7ನ್ನು ನೋಡಿರಿ). ನಾನು ಹೀಗೆ ಊಹಿಸುತ್ತೇನೆ ಆ ಸೇವಕನು ಓಡುತ್ತಾ ಹೊರಬಂದು ಪಟ್ಟಣದ ಸುತ್ತಲಿರುವ ಸೈನಿಕರನ್ನು "ಒಂದು ... ಎರಡು ... ಮೂರು (ಗೊಣಗಿದ, ಗೊಣಗಿದ) ... ತೊಂಬತ್ತೈದು ... (ಗೊಣಗಿದ, ಗೊಣಗಿದ) ಅಲ್ಲಿ *ನೂರು* ಜನರು ಇದ್ದಾರೆ!" ನಂತರ ನಾನು ನೋಡುತ್ತೇನೆ, "ಆತನು ಹಿಂದಕ್ಕೆ ಒಳಗೆ ಓಡಿ ಬಂದನು ಮತ್ತು ಎಣಿಸಲು ಮಾತಿನ ಅರ್ಥವೇನಂದರೆ, *ನಮ್ಮೊಂದಿಗೆ* ಇರುವವರು *ಅವರಿಗಿಂತ* ಹೆಚ್ಚಾಗಿದ್ದಾರೆಯೇ?"

ನಂತರ ಎಲೀಷನು ಪ್ರಾರ್ಥಿಸಿದನು. ಆತನು ತನಗಾಗಿ ಪ್ರಾರ್ಥಿಸಲಿಲ್ಲ. ಆತನು ಎಲೀಯನು ಭೂಮಿಯನ್ನು ಬಿಟ್ಟು ಹೋಗುವ ಮುನ್ನ ಕಂಡಂತಹ "ಅಗ್ನಿಮಯಾದ ರಥರಥಾಶ್ವಗಳನ್ನು ಆತನು ಕಂಡನು" (2 ಅರಸು 2:11). ಆತ್ಮೀಕ ನೈಜತೆಯ ಬಗೆಗೆ ಆತನು ತೀವ್ರ ಎಚ್ಚರದಿಂದಿದ್ದನು; ದೇವರು ತನ್ನನ್ನು ರಕ್ಷಿಸುತ್ತಾನೆ ಎಂಬುದನ್ನು ಆತನು ಬಲ್ಲವನಾಗಿದ್ದನು. ಬದಲಾಗಿ ಆತನು ತನ್ನ ಭಯಗ್ರಸ್ತನಾದ ಸೇವಕನಿಗಾಗಿ ಪ್ರಾರ್ಥಿಸಿದನು: "ಯೆಹೋವನೇ ಇವನು ನೋಡುವಂತೆ ಇವನ ಕಣ್ಣುಗಳನ್ನು ತೆರೆ" (6:17ಎ). ಆತನ ಸೇವಕನು ತನ್ನ ದೇಹದ ಕಣ್ಣುಗಳಿಂದ ನೋಡುವ ಬದಲು; ಆತನಿಗೆ "ನಂಬಿಕೆಯ ಕಣ್ಣುಗಳಿಂದ ನೋಡವದು" ಕೂಡ ಅವಶ್ಯವಿತ್ತು. Burton Coffman ಅವರು 17ನೇಯ ವಚನವನ್ನು "[ಹಳೆಯ ಒಡಂಬಡಿಕೆ]ಯಲ್ಲಿ ಬಲು ಸ್ಫೂರ್ತಿದಾಯಕವಾದ ವೇದಭಾಗ" ಎಂದಿದ್ದಾರೆ.[7]

"ಮತ್ತು ಯೆಹೋವನು ಅವನ ಕಣ್ಣುಗಳನ್ನು ತೆರೆದನು. ಆಗ ಎಲೀಷನ ರಕ್ಷಣೆಗಾಗಿ ಸುತ್ತಣ ಗುಡ್ಡಗಳಲ್ಲಿ ಬಂದು ನಿಂತಿದ್ದ ಅಗ್ನಿಮಯವಾದ ರಥರಥಾಶ್ವಗಳು ಆ ಸೇವಕನಿಗೆ ಕಂಡವು" (ವಚನ 17ಬಿ). ದೋತಾನಿನ ಪೂರ್ವಕ್ಕೆ ಇರುವ ಬಯಲಿನಲ್ಲಿ ಬೆಟ್ಟಗಳ ಸರಣಿಯ ಮುಂದುವರೆದಿದೆ.[8] ಒಂದು ಕ್ಷಣಕ್ಕಿಂತ ಮುಂಚೆ, ಬೆಟ್ಟದ ಇಳಿಜಾರುಗಳು ಶಾಂತವಾಗಿದ್ದವು, ಎತ್ತರವಾದ ಹುಲ್ಲುಗಳು ಕಂಟಿಗಳು ಮತ್ತು ಗಿಡಗಳು ಅಲ್ಲಿ ಇಲ್ಲಿ ಹರಡಿಕೊಂಡಿದ್ದವು. ಈಗ ಒಮ್ಮಲೇ, ಈ ಸೇವಕನು ನೋಡುತ್ತಾನೆ ಆ ಬೆಟ್ಟಗಳು "ಕುದುರೆಗಳು ಮತ್ತು ಬೆಂಕಿಯ ರಥರಥಾಶ್ವಗಳಿಂದ" ಗಿಜುಗುಟ್ಟುತ್ತಿವೆ. "ಅವುಗಳು ... ವಿಚಿತ್ರವಾದ ಪರಲೋಕದ ಹೊಳಪಿನಿಂದ ಹೊಳೆಯುತ್ತಿದ್ದವು."[9]

ವಚನ 17ರಲ್ಲಿ ಬಳಸಲಾರದ ದೃಷ್ಟಾಂತವು "ಶ್ರೇಷ್ಟವಾದ ದೇವದೂತನು ದೃಷ್ಟಿಗೆ ಗೋಚರವಾಗುವಂತೆ ಮತ್ತು ಶಬ್ದವನ್ನೂ ಮೀರಿ ಅಲ್ಲಿ ಸುಳಿದಾಡುತ್ತಿದ್ದನು"[10] ಎಂದು ಬೈಬಲ್ ಹೇಳುವ ಒಂದು ರೂಪಕವಾಗಿದೆ. ಈ "ದಿವ್ಯ ಸಮೂಹವು" "ಎಲೀಷನ ಸುತ್ತಲಿರುವ ಎಲ್ಲಾ" ಇರುವಿಕೆಯ ಬಗೆಗೆ ಮಾತನಾಡುವುದಾಗಿದೆ (ವಚನ 17ಸಿ). ಮುಂಚೆ, ಈ ವ್ಯೂಹವು ದೇವರ ಸೇವಕನಾದ ಎಲೀಯನಿಗೆ ಪರಲೋಕಕ್ಕೆ ಹೋಗುವಲ್ಲಿ ಜೊತೆಗೂಡಿದ ವ್ಯೂಹವಾಗಿದೆ; ಈಗ ದೇವರ ಸೇವಕನಾದ ಎಲೀಷನನ್ನು ರಕ್ಷಿಸುತ್ತಿವೆ.

**ಭಯಗ್ರಸ್ಥರಾದವರಿಗೆ ಸಮಾಧಾನ**

ಎಲೀಷನ ಸಂದೇಶಗಳು ಇನ್ನೂ ನಮಗಾಗಿ ಮಾತನಾಡುತ್ತಿವೆ: "ಹೆದರಬೇಡ; ಅವರ ಕಡೆಯಲ್ಲಿರುವವರಿಗಿಂತಲೂ ನಮ್ಮ ಕಡೆಯಲ್ಲಿರುವವರು ಹೆಚ್ಚಾಗಿದ್ದಾರೆ" (ವಚನ 16). ನಮಗೆ ಇಲ್ಲಿರುವಂತಹ ಅವಶ್ಯಕತೆಯೆಂದರೆ ಆತ್ಮೀಕ ನೈಜತೆಗಾಗಿ ನಮ್ಮ ಕಣ್ಣುಗಳನ್ನು ತೆರೆಯೋಣ. ನಾವು ಕೇವಲ ಶಾರೀರಿಕ ಕಣ್ಣಿನಿಂದ ನೋಡಿ ದ್ದಾದರೆ, ನಾವು ನಿರಂತರವಾಗಿ ನಿರಾಸೆ ಮತ್ತು ಉತ್ಸಾಹಭಂಗಗೊಳಿಸುವಿಕೆಗಳನ್ನು ನಾವು ಅನುಭವಿಸುತ್ತೇವೆ. ನಾವು ಒಂದು ವೇಳೆ ಅದನ್ನು ನಂಬಿಕೆಯ ಕಣ್ಣುಗಳಿಂದ ನೋಡುವದನ್ನು ಕಲಿತುಕೊಂಡಿದ್ದಾದರೆ (ನೋಡಿರಿ ಇಬ್ರಿಯ 11:27), ನಾವು ಪುನಶ್ಚೇತನಗೊಳ್ಳುವೆವು ಮತ್ತು ಪುನಃ ಸತ್ವಯುತಗೊಳ್ಳುವೆವು.

ಎಲೀಷನ ಪರಲೋಕದ ಸೈನ್ಯವು ಸುತ್ತುವರೆದಂತೆಯೇ, ದೇವರ ದೂತರೂ ಆತನ ಜನರಿಗೆ ಸಹಾಯಿಸಲು ಮತ್ತು ರಕ್ಷಿಸಲು ಸುತ್ತುವರೆದಿದ್ದರು. "ಯೆಹೋವನ ಭಯಭಕ್ತಿಯುಳ್ಳವರ ಸುತ್ತಲು ಆತನ ದೂತನು ದಂಡಿಳಿಸಿ ಕಾವಾಲಾಗಿದ್ದು ಕಾಪಾಡುತ್ತಾನೆ" (ಕೀರ್ತನೆ 34:7). ತಿರುಗಿ ಕೀರ್ತನೆಗಾರನು ಹೀಗೆ ಬರೆಯುತ್ತಾನೆ "ಪರ್ವತಗಳು ಯೆರೂಸಲೇಮಿನ ಸುತ್ತಲೂ ಹೇಗೋ ಹಾಗೆಯೇ ಯೆಹೋವನು ಇಂದಿನಿಂದ ಸದಾಕಾಲವೂ ತನ್ನ ಜನರ ಸುತ್ತಲೂ ಇರುವನು" (ಕೀರ್ತನೆ 125:2). ಹೊಸ ಒಡಂಬಡಿಕೆಯಲ್ಲಿ ದೇವದೂತರು "ಇವರೆಲ್ಲರು ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರ ಸೇವೆಗೋಸ್ಕರ ಕಳುಹಿಸಲ್ಪಡುವ ಊಳಿಗದ ಆತ್ಮಗಳು" ಎಂದು ವರ್ಣಿಸಲ್ಪಟ್ಟಿದ್ದಾರೆ (ಇಬ್ರಿಯ 1:14).

ದುಷ್ಟತ್ವದ ಸೈನ್ಯದ ಶಕ್ತಿಯನ್ನು ನಾನು ಹಗುರವಾಗಿ ಭಾವಿಸಲಾರೆನು (ನೋಡಿರಿ ಎಫೆಸ 6:12), "ಆದರೆ ಅವರ ಕಡೆಯಲ್ಲಿರುವವರಿಗಿಂತಲೂ ನಮ್ಮ ಕಡೆಯಲ್ಲಿರುವವರು ಹೆಚ್ಚಾಗಿದ್ದಾರೆ" (2 ಅರಸು 6:16ಬಿ) ಎಂಬ ಮಾತುಗಳು ನಮ್ಮ ಹೃದಯದಲ್ಲಿ ಕೆತ್ತಲ್ಪಡಬೇಕು. ಯೇಸುವೂ ಕೂಡ "ಹನ್ನೆರಡು ಗಣಗಳಿಗಿಂತಲೂ ಹೆಚ್ಚು ಮಂದಿ ದೇವದೂತರನ್ನು" (ಮತ್ತಾಯ 26:53) ಕರೆಯಬಹುದಿತ್ತು. ಅದು 72,000ಕ್ಕೂ ಹೆಚ್ಚು ದೇವದೂತರು ಎಂದಾಗಿದೆ. ಪ್ರಕಟಣೆಯಲ್ಲಿನ ಸೂಚ್ಯಾರ್ಥಕ ದೃಷ್ಟಾಂತದಲ್ಲಿ, ದೇವರ ಮುಯ್ಯಿಗೆ ಮುಯ್ಯಿ ತೀರಿಸುವ ನಿಯೋಗಿಗಳ ಸಂಖ್ಯೆಯು "ಇಪ್ಪತ್ತು ಕೋಟಿ" ಎಂದು ಹೇಳಲ್ಪಟ್ಟಿದೆ (ಪ್ರಕಟಣೆ 9:16). ಇಲ್ಲಿನ ಸಂಖ್ಯೆಯನ್ನು ಅಕ್ಷರಸಹ ತೆಗೆದುಕೊಳ್ಳುವುದಲ್ಲ, ಆದರೆ ಇದು ಪರಲೋಕದ ಅಸಂಖ್ಯವಾದ ಸೇನೆಯ ದೃಷ್ಟಾಂತದ ಕಲ್ಪನೆಯಾಗಿದೆ.

ದೇವದೂತರ ಬಗೆಗೆ ಅಲ್ಲಿ ನಾವು ತಿಳಿಯದಂತಹದು ಹೆಚ್ಚಾಗಿದೆ. ಕಟ್ಟುಕಥೆ ಮತ್ತು ಕಲ್ಪನೆಗಳ ದೊಡ್ಡ ವರ್ತನೆಯನ್ನು ನಾವು ಇಂದು ಓದುವ ದೇವದೂತರ ಬಗೆಗೆ ಓದುತ್ತೇವೆ. ಹೇಗೋ, ಇದನ್ನು ನಾವು ತಿಳಿಯಬಹುದಾಗಿದೆ ಅದೇನಂದರೆ ಅವರು ದೇವರ ಶಕ್ತಿಯುತವಾದ ನಿಯೋಗಿಗಳಾಗಿದ್ದಾರೆ, ಅವರು ನಮ್ಮ ಸೌಖ್ಯದ ಜೀವನ ಮುಖ್ಯವಾದ ಅಂಗಗಳಾಗಿ ಪರಿಗಣಿಸಲ್ಪಟ್ಟಿದ್ದಾರೆ (ಕೀರ್ತನೆ 91:11), ಮತ್ತು ದೇವರು ಅವರನ್ನು ನಮ್ಮ ಜೀವಿತವನ್ನು ಆಶೀರ್ವದಿಸಲು ಬಳಸುತ್ತಾನೆ. ಹಳೆಯ ಒಡಂಬಡಿಕೆಯಲ್ಲಿ, ಎಲೀಷನು ಇದನ್ನು ಈ ರೀತಿಯಲ್ಲಿ ಇರಿಸುತ್ತಾನೆ: "ಆದರೆ ಅವರ ಕಡೆಯಲ್ಲಿರುವವರಿಗಿಂತಲೂ ನಮ್ಮ ಕಡೆಯಲ್ಲಿರುವವರು ಹೆಚ್ಚಾಗಿದ್ದಾರೆ" (2 ಅರಸು 6:16ಬಿ). ಹೊಸ ಒಡಂಬಡಿಕೆಯಲ್ಲಿ, ಯೋಹಾನನು ಈ ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ: "ಲೋಕದಲ್ಲಿರುವವನಿಗಿಂತ ನಿಮ್ಮಲ್ಲಿರುವಾತನು ಹೆಚ್ಚಿನವಾಗಿದ್ದಾನೆ" (1 ಯೋಹಾನ 4:4).

ಮುಂದಿನ ಸಾರಿ ನಿಮ್ಮನ್ನು ನೀವು ಆತ್ಮೀಕ ಹೋರಾಟದಲ್ಲಿ ಕಂಡುಕೊಳ್ಳುವಾಗ, ನಿಮಗಾಗಿ ಹೋರಾಡುತ್ತಿರುವವರು ಯಾರು ಎಂಬುದನ್ನು ನೆನಪಿಟ್ಟುಕೊಳ್ಳಿರಿ. ಮೋಶೆಯು ಇಸ್ರಾಯೇಲ್ಯರಿಗೆ, "ದೇವರಾದ ಯೆಹೋವನು ತಾನೇ ನಿಮ್ಮ ಸಂಗಡ ಇದ್ದು ಶತ್ರುಗಳೊಡನೆ ನಿಮಗೋಸ್ಕರ ಯುದ್ಧಮಾಡಿ ಜಯವನ್ನುಂಟು ಮಾಡುವನು" (ಧರ್ಮೋಪದೇಶಕಾಂಡ 20:4) ಎಂದು ಹೇಳಿದನು. ಹಿಜ್ಕೀಯನು ತನ್ನ ದಿನಗಳಲ್ಲಿ ಜನರಿಗೆ "ನಮಗಾದರೋ ನಮ್ಮ ದೇವರಾದ ಯೆಹೋವನೇ. ಆತನು ನಮಗೆ ನೇರವಾಗಿ ಯುದ್ಧಗಳಲ್ಲಿ ನಮಗೋಸ್ಕರ ಕಾಪಾಡುವನು" (2 ಪೂರ್ವಕಾಲವೃತ್ತಾಂತ 32:8ಬಿ) ಎಂದು ಹೇಳಿದನು. ನಮ್ಮ ಯುದ್ಧಗಳು ಆತ್ಮೀಕವಾಗಿರುವಾಗ ಅವರವೋ ದೈಹಿಕವಾದವುಗಳು ಆಗಿವೆ, ಆದರೆ ಅದೇ ದೇವರೇ ನಮ್ಮೊಂದಿಗಿದ್ದು "ನಮಗಾಗಿ ಯುದ್ಧಮಾಡುವವನಾಗಿದ್ದಾನೆ" ಪೌಲನು ಬರೆಯುವ ಹಾಗೆ "ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದರಿಸುವರು ಯಾರು?" (ರೋಮಾಪುರ 8:31ಬಿ). ಒಂದು ವೇಳೆ ದೇವರು "ನಮಗಾಗಿ" ನಮ್ಮನ್ನು ಸಂರಕ್ಷಿಸುವಾಗ, ನಮ್ಮನ್ನು ನಾಶಮಾಡಲು "ನಮಗೆ ವಿರುದ್ಧವಾಗಿರುವ" ಸಾಧ್ಯತೆಯು ಎಲ್ಲಿದೆ? ಇದಕ್ಕೆ ಉತ್ತರವು "ಯಾರೊಬ್ಬರಲ್ಲೂ ಇಲ್ಲ" ಎಂದಾಗಿದೆ.

ಎಲೀಷನು "ಯೆಹೋವನೇ ಇವನು ನೋಡುವಂತೆ ಇವನ ಕಣ್ಣುಗಳನ್ನು ತೆರೆ" ಎಂದು ಪ್ರಾರ್ಥಿಸಿದನು (2 ಅರಸು 6:17ಎ). ಮುಂದಿನ ಸಾರಿ ನಾವು ಭಯ ಮತ್ತು ನಿರಾಶೆಗಳಿಂದ ತುಂಬಿಕೊಂಡಾಗ, "ಕರ್ತನೇ, ನಮ್ಮ ಕಣ್ಣುಗಳನ್ನು ತೆರೆ ನೀನು ನಮ್ಮನ್ನು ಪ್ರೀತಿಸುತ್ತೀ ಮತ್ತು ನಮ್ಮನ್ನು ಸಂರಕ್ಷಿಸುವವನಾಗಿದ್ದೀ ಎಂಬುದನ್ನು ನಾವು ತಿಳಿದುಕೊಳ್ಳಲು ಸಹಾಯಿಸು" ಎಂದು ಪ್ರಾರ್ಥಿಸುವುದು ಅವಶ್ಯವಿದೆ!

## ಮುಕ್ತಾಯ

ನಮ್ಮ ಮುಂದಿನ ಪಾಠದಲ್ಲಿ "ತೆರೆದ ಮತ್ತು ಮುಚ್ಚಿದ ಕಣ್ಣುಗಳ ಮನುಷ್ಯನು" ಎಂಬ ಅಧ್ಯಯನವನ್ನು ನಾವು ಮುಂದುವರೆಸುವಾ. ಎಲೀಷ ಮತ್ತು ಆತನ ಸೇವಕನ ಸಂರಕ್ಷಣೆಯನ್ನು ಮತ್ತು ಮುಂದಿನ ಅನಿರೀಕ್ಷಿತವಾದ ಫಲಿತಾಂಶವನ್ನು ನಾವು ನೋಡು ವವರಾಗಿದ್ದೇವೆ. ನಾವು ಈ ಪಾಠವನ್ನ ಮುಗಿಸುತ್ತಿದ್ದಂತೆ ಹೇಗೋ, ನಮ್ಮ ಕಣ್ಣುಗಳನ್ನು ನಮಗಾಗಿ ತೆರೆಯುವ ಅವಶ್ಯಕತೆಯನ್ನು ನಾನು ಒತ್ತಿ ಹೇಳಲು ಬಯಸುತ್ತೇನೆ.

ಪೌಲನು "ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗಬಾರದೆಂದು ಈ ಪ್ರಪಂಚದ ದೇವರು [ಸೈತಾನ] ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದನು" (2 ಕೊರಿಂಥ 4:4) ಎಂದು ಹೇಳುತ್ತಾನೆ. ಸೈತಾನನು ಕರ್ತನ ರಕ್ಷಣೆಯ ಮತ್ತು ಸಂರಕ್ಷಣೆಯನ್ನು ತೊರೆದುಬಿಡುವಂತೆ ಬಹುಶಃ ನಿನ್ನ ಕಣ್ಣುಗಳನ್ನು ಕುರುಡಾಗಿಸಿಬಿಡುತ್ತಾನೆ. ಕೆಲ ಕಾರಣಕ್ಕಾಗಿ, ದೇವರ ರಾಜ್ಯದ ದೊಡ್ಡ ಸತ್ಯಗಳು ನೀವು ಕೇವಲ ನಿಮ್ಮ ಕಣ್ಣುಗಳನ್ನು ಮುಚ್ಚಿಕೊಂಡಿರಲು ಸಾಕು (ಮತ್ತಾಯ 13:15). ಜೇಮ್ಸ್ ಡಬ್ಲು. ನಿಕೋಲ್ಸ್ ಬರೆಯುವುದೇನೆಂದರೆ,

> ಬಾಲಕನಾಗಿದ್ದಾಗ ನನಗೆ ಒಂದು ಚಟವಿತ್ತು, ನಾನು ಕತ್ತಲೆಯಲ್ಲಿ ನಡೆಯುವಾಗ, ನಾನು ನನ್ನ ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಳ್ಳುತ್ತಿದ್ದೆನು. ಅನೇಕ ಸಂದರ್ಭಗಳಲ್ಲಿ ನಾನು ಸ್ವಲ್ಪ ದೂರದಲ್ಲಿ ನನಗೆ ನೋಡಲು ಸಾಧ್ಯವಾಗುವಂತಹ ಬೆಳಕಿನ ಪ್ರತಿಫಲನ ಬರುವ ಪ್ರದೇಶಕ್ಕೆ ಬರುತ್ತಿದ್ದೆನು, ಆದರೆ ನಾನು ಗಟ್ಟಿಯಾಗಿ ಕಣ್ಣನ್ನು ಮುಚ್ಚಿದಾಗ ಕಣ್ಣುಕಾಣದೇ ಮುಗ್ಗರಿಸಿ ಬೀಳುತ್ತಿದ್ದೆನು; ನಾನು ಮುಗ್ಗರಿಸಿದೆನು, ಕಣ್ಣುಗಳನ್ನು ತೆರೆದು ನೋಡಿದಾಗ ಇದೆಂಥ ಹುಚ್ಚುತನವಾಗಿತ್ತು, ಯಾಕೆಂದರೆ, ಒಂದು ವೇಳೆ ನಾನು ನನ್ನ ಕಣ್ಣುಗಳನ್ನು ತೆರೆದಿದ್ದರೆ ನಾನು ನೋಡಬಹುದಿತ್ತು.
>
> ಸ್ನೇಹಿತರೇ, ಇಂದು ನಿನ್ನಂತೆ ದೇವರೆಡೆಗೆ ಮತ್ತು ಆತನ ಅದ್ಭುತವಾದ ಪ್ರೀತಿ ಯೆಡೆಗೆ - ಕ್ರಿಸ್ತನ ಮೂಲಕ ಬಿಡುಗಡೆಯ ಮಾರ್ಗಕ್ಕೆ ಹತ್ತಿರವಾಗುವವರು ಹತ್ತಿರವಾಗಿ ಹತ್ತಿರವಾಗಿ ಜೀವನದ ಮೂಲಕ ಸಾಗುತ್ತಿರುವವರು ಸಾವಿರಾರು ಜನರು. ವೃದ್ಧನಾದಂತಹ ಎಲೀಷನಂತೆ ನನ್ನ ಪ್ರಾರ್ಥನೆಯು "ಯೆಹೋವನೇ, ಅವರ ಕಣ್ಣುಗಳನ್ನು ತೆರೆ ಆಗ ನೋಡುವವರು" ಎಂಬುದಾಗಿದೆ.[11]

ಒಂದು ವೇಳೆ ನಿನ್ನ ಕಣ್ಣುಗಳು "ಮುಚ್ಚಿದ್ದೇ ಆದರೆ" ಅವುಗಳನ್ನು ಇಂದು ತೆರೆ - ಮತ್ತು ಆತನಿಗೆ ವಿಧೇಯನಾಗು!

---

ಟಿಪ್ಪಣಿಗಳು

[1]Clyde M. Miller, *First and Second Kings,* The Living Word Commentary series, vol. 7 (Abilene, Tex.: A.C.U. Press, 1991), 339. [2]Ibid. [3]Henry Blunt, *Lectures on the*

*History of Elisha* (Philadelphia: Herman Hooker, 1839), 135. [4]J. Vernon McGee, *Danger and Destiny: Episodes in the Life of Elisha* (Pasadena, Calif.: Thru the Bible Radio Network, n.d.), 20. [5]**"ಆತನು ಇತ್ತೀಚೆಗಷ್ಟೇ ಎದ್ದಿರಬಹುದು" ಎಂಬಂತಹವುಗಳು ಗಮನಿಸಲ್ಪಟ್ಟಂತಹ ಇತರ ಸಾಧ್ಯತೆಗಳಾಗಿವೆ. ಇವುಗಳನ್ನು ನೀವು ಇರುವಂತಹ ಸ್ಥಳಗಳಿಗೆ ಅವಶ್ಯವಿದ್ದಷ್ಟನ್ನು ತೆಗೆದುಕೊಳ್ಳಿರಿ.** [6]Joe D. Schubert, "Open Our Eyes That We May See," *The Preacher's Periodical* (June 1982): 17. [7]James Burton Coffman and Thelma B. Coffman, *Commentary on Second* Kings, James Burton Coffman Commentaries, The Historical Books, vol. 6 (Abilene, Tex.: A.C.U. Press, 1992), 81. [8]C. F. Keil and F. Delitzsch, "1 and 2 Kings," *Commentary on the Old Testament*, vol. 3, *1 and 2 Kings, 1 and 2 Chronicles, Ezra, Nehemiah, Esther* (Peabody, Mass.: Hendrickson Publishers, 1989), 326. [9]G. Rawlinson, "2 Kings," *The Pulpit Commentary,* vol. 5, *1 & 2 Kings,* ed. H. D. M. Spence and Joseph S. Exell (Grand Rapids, Mich.: Wm. B. Eerdmans Publishing Co., 1950), 121, [10]James E. Smith, *The Books of History,* Old Testament Survey Series (Joplin, Mo.: College Press Publishing Co., 1995), 568.

[11]James W. Nichols, "Lord, Open Our Eyes," *Churches of Christ Salute You: January and February Sermons* (Abilene, Tex.: Herald of Truth, 1955), 9.